ಬೆಂಗಳೂರು ಸೆಂಟ್ರಲ್‌ಜೈಲ್.

ತಾರೀಖು 30ನೇ ನವೆಂಬರ್ 1896.

ಇದರಿಂದ ತಿಳಿಯಪಡಿಸುವದೇನಂದರೆ,—ಬೆಂಗಳೂರ ಸೆಂಟ್ರಲ್ ಜೈಲ್‌ನಲ್ಲಿ ಖೈದು ಮಾಡಲ್ಪಟ್ಟು ಇರುವ ಕೈದಿಗಳ ಉಪಯೋಗದ ಬಗ್ಗೆ ಸ್ ೧೮೯೭ನೇ ಇಸವಿ ಫಿಬ್ರವರಿ ಗುರ್ವೇ ಲಾಗಾಯತು 1898ನೇ ಇಸವಿ ಜನವರಿ 31ನೇ ತಾರೀಖಿನ ವರಿಗೂ ಆ 2 ದಿನಗಳೂ ಸೇರಿ ಕೆಳಗೆ ನಮೂದು ಮಾಡುವ ಜಿನಸುಗಳನ್ನು ಕಂಟ್ರಾಕ್ಟು ಮೂಲಕ ಸರಬರಾಯಿ ಮಾಡುವ ಬಗ್ಗೆ ಬರುವ ಮೊಹರ್ ಮಾಡಲ್ಪಟ್ಟ ದರಖಾಸ್ತುಗಳು ಬೆಂಗಳೂರ ಸೆಂಟ್ರಲ್ ಜೈಲ್ ಸೂಪರ್‌ಇಂಟೆಂಡೆಂಟರವರಿಂದ, ಸ್ ೧೮೯೬ನೇ ಇಸವಿ ಡಿಸೆಂಬರ್ ತಾರೀಖು 19ನೇ ಶನಿವಾರ ಹಗಲು 1 ಘಂಟೆ ವರಿಗೂ ತೆಗದುಕೊಳ್ಳಲ್ಪಡುವವು.

2. ಮೇಲೆ ನಮೂದು ಮಾಡಿರುವ ತಾರೀಖಿನ ನಂತರ ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡುವದಿಲ್ಲ.

3. ಟೆಂಡರುಗಳಿಗೆ ಈ ಕೆಳಗೆ ನಮೂದು ಮಾಡಿರುವಂತೆ ಬೇರೆಬೇರೆ ಮೇಲ್ ವಿಳಾಸ ಬರೆದು ಇರತಕ್ಕದ್ದು:—

1ನೇ ಧಾನ್ಯಕ್ಕೆ	ದರಖಾಸ್ತು
2ನೇ ಮಸಾಲೆ ಜಿನಸುಗಳಿಗೆ	ದರಖಾಸ್ತು
3ನೇ ಇತರ ಅವಶ್ಯಕವಾದ ಪದಾರ್ಥಗಳ ಬಗ್ಗೆ.	ದರಖಾಸ್ತು

4. ಧಾನ್ಯಕ್ಕೆ ... ... ರೂಪಾಯಿ 200
ಮಸಾಲೆ ಜಿನಸುಗಳಿಗೆ .. ,, 50
ಇತರ ಅವಶ್ಯಕವಾದ ಪದಾರ್ಥಗಳಿಗೆ .. ,, 150

ಈ ಮೇರಿಗೆ ನಗದಾಗಿ ಆಗಲಿ, ಕರೆನ್ಸಿನೋಟುಗಾಗಿ ಆಗಲಿ ಕೇವಣಾತಿ ಮೊಬಲಗು ಇಲ್ಲದೆ ಬರುವ ದರಖಾಸ್ತುಗಳು ಅಂಗೀಕರಿಸಲ್ಪಡುವದಿಲ್ಲ.

5. ದರಖಾಸ್ತುಗಳು ಬೆಂಗಳೂರ್ ಸೆಂಟ್ರಲ್‌ಜೈಲ್ ಸೂಪರ್‌ಇಂಟೆಂಡೆಂಟರವರಿಂದ ಅವರ ಆಫಿಸಿನಲ್ಲಿ ಆ ಕಾಲದೊಳು ಹಾಜರಾಗಲಿಕ್ಕೆ ಇಷ್ಟವುಳ್ಳ ದರಖಾಸ್ತುದಾರರುಗಳ ರೂಬರೂಬ್ ಮೇಲ್ಕಂಡ ತಾರೀಖು ಮತ್ತು ಘಂಟೆಯಲ್ಲಿ ಖುಲ್ಲಾ ಮಾಡಲ್ಪಡುವವು.

6. ಕೆಳಗೆ ವಿವರಿಸಿರುವ ಜಿನಸುಗಳನ್ನು ಸರಬರಾಯಿ ಮಾಡುವ ದರ ರೂಪಾಯಿ 1ಕ್ಕೆ ಇಷ್ಟು ಪೌಂಡ್ ಎಂತ ದರಖಾಸ್ತುಗಳಲ್ಲಿ ನಮೂದಾಗಬೇಕು. ಮತ್ತು ಜಿನಸುಗಳು ಒಳ್ಳೇದಾಗಿರಬೇಕು.

ಸಂವತ್ಸರಕ್ಕೆ ಬೇಕಾಗಬಹುದಾದ ಜಿನಸುಗಳ ಪಟ್ಟಿ.

1ನೇ ಧಾನ್ಯ.

	ಸುಮಾರು ಬೇಕಾದ್ದು.
ಅಕ್ಕಿ	56,000 ಪೌಂಡ್
ರಾಗಿ	240,000 ಪೌಂಡ್
ತೊಗರೀಬ್ಯಾಳೆ	11,000 ಪೌಂಡ್
ಅವರೇಬ್ಯಾಳೆ	19,000 ಪೌಂಡ್

2ನೇ ಮಸಾಲೆ ಜಿನಸುಗಳು.

* ಖಾರದ ಸಾಮಾನಿಗೆ ಬೇಕಾದ ಜಿನಸುಗಳು.	* ಖಾರದ ಸಾಮಾನು ಯಾ ಪುಡಿ 4,200 ಪೌಂಡ್.
1 ಪೌಂಡ್ ಮೆಣಸಿನ ಕಾಯಿ	ಈರುಳ್ಳಿ .. 6,000 ,,
12 ಔನ್ಸ್ ಕೊತ್ತುಂಬರಿ ಬೀಜ	ಬೆಳ್ಳುಳ್ಳಿ .. 600 ,,
2 ಔನ್ಸ್ ಅರಿಸಿನ	ಹುಣಸೇಹಣ್ಣು . 6,000 ,,
1 ,, ಜೀರಿಗೆ	ಉಪ್ಪು .. 8,400 ,,
6 ,, ಮೆಣಸು	ಮೆಣಸು .. 100 ,,
3 ,, ಪೋಸ್ತು ಕಾಯಿ	
1 ,, ಮೆಂತ್ಯ	
1 ,, ಸಾಸಿವೆ	
1 ,, ಕರೆಬೇವಿಸೊಪ್ಪು	

3ನೇ ಇತರ ಅವಶ್ಯಕವಾದ ಪದಾರ್ಥಗಳು.

ಮೊಸರು	..	24,000 ಪೌಂಡ್.	ರೊಟ್ಟಿ	..	1,000 ಪೌಂಡ್.
ಒಳ್ಳೆಯಂಣೆ	...	2,400 ,,	ಹಾಲು	..	4,500 ,,
ತುಪ್ಪ	..	1,200 ,,	ಶೀಗೇಕಾಯಿ	..	400 ,,
ತರಕಾರಿ	..	72,000 ,,	ಗೇರುಬೀಜ	..	300 ,,
ರವೆ	..	200 ,,	ದೀಪದೆಂಣೆ	..	350 ,,
ಸಕ್ಕರೆ	..	300 ,,	ಪೊರಕೆಗಳು	..	1,500 ಆದದು
ಕಾಫಿ	..	50 ,,	ಕೊಬ್ಬರಿ ಎಂಣೆ	..	100 ಪೌಂಡ್
ಟೀ	...	10 ,,			

ಮೇಲೆ ನಮೂದು ಮಾಡಿರುವ ಜಿನಸಿನ ಪೊತ್ತಗಳು ಇಷ್ಟೇ ತೆಗದುಕೊಳ್ಳುತ್ತೇವೆಂದು ಖಾತರಿ ದೊರೆಯಲಾರದು.

7. ಕಂಟ್ರಾಕ್ಟುದಾರನು ಕೈದಿಗಳಿಂದ ಬೀಸಲ್ಪಡುವದಕ್ಕೆ ರಾಗಿ ಸರಬರಾಯಿ ಮಾಡಬೇಕು. ಹಾಗೆ ತಯಾರಾದ ಹಿಟ್ಟನ್ನು ಕೈದಿಗಳಿಗೆ ಕೊಡಲ್ಪಡುವದು. ಹಾಗೆ ಸರಬರಾಯಿ ಆದ ರಾಗಿ ಹಿಟ್ಟಿಗೆ ಸರಿಯಾದ ರಾಗಿ ಇಷ್ಟೆಂದು ಲೆಖ್ಖ ಮಾಡಿ ಆ ರಾಗೀ ದರದ ಮೇಲೆ ಹಣ ಪಾವತಿಯಾದೀತು.

8. ಸೂಪರ್‌ಇಂಟೆಂಡೆಂಟರವರು ಅತ್ಯಂತ ಕಮ್ಮಿ ದರವನ್ನಾಗಲಿ ಅಥವಾ ಮತ್ತೆ ಯಾವ ದರವನ್ನೇ ಆಗಲಿ ಅಂಗೀಕರಿಸಲು ಬದ್ಧರಾಗಿರುವದಿಲ್ಲ. ಮತ್ತು ಕಾರಣವನ್ನು ಹೇಳಬೆ ಬೇಕಾದ ದರಖಾಸ್ತನ್ನು ತಿರಸ್ಕರಿಸಬಹುದು.

9. ಮಂಜೂರಾದ ದರಖಾಸ್ತುದಾರನ ಕೇವಣಿ ಮೊಬಲಗು ಇಟ್ಟು ಕೊಳ್ಳಲ್ಪಡುವದು. ಮತ್ತು ಅವರ ದರಖಾಸ್ತು ಮಂಜೂರಾದ ಸಂಗತಿ ಅವರಿಗೆ ತಿಳಿಸಿದ ತಾರೀಖು ಲಾಗಾಯತು ಒಂದು ವಾರದೊಳಗೆ ಅವರು ಕಂಟ್ರಾಕ್ಟು ಮುಚ್ಚಳಿಕೆ ಬರದುಕೊಡುವದಕ್ಕೆ ತಪ್ಪಿದರೆ, ಅಥವಾ ನಗದಾಗಿ ಆಗಲಿ ಗವರ್ಮೆಂಟ್ ಬಾಂಡ್ ಮೂಲಕವಾಗಿಯಾಗಲಿ ಧಾನ್ಯಕ್ಕೆ 500 ರೂಪಾಯಿ.

ಮಸಾಲೆ ಜೆನಸಿಗೆ .. .. ರೂ. 100.
ಇತರ ಅವಶ್ಯಕವಾದ ಪದಾರ್ಥಗಳಿಗೆ .. .. ರೂ. 300.

ಈ ಮೇರೆ ಜಾಮೀನು ಕೊಡಲು ತಪ್ಪಿದರೆ ಅಂಥಾ ತೀರ್ಪಿನ ಮೊಬಲಗು ದಂಡವಾಗಿ ತೆಗೆದುಕೊಳ್ಳಲ್ಪಡುವದು.

10. ಕಂಟ್ರಾಕ್ಟುದಾರರಿಗೆ ನಗದಾಗಿ ಅಡ್ವಾನ್ಸು ಏನೂ ಕೊಡುವದಿಲ್ಲ. ಸರಬರಾಯಿ ಮಾಡಲ್ಪಟ್ಟಂಥಾ ಸಾಮಾನು ಕಿಮ್ಮತ್ತು ಪ್ರತಿ ತಿಂಗಳ 1ನೇ ತಾರೀಖು ನಂತರ ಕಂಟ್ರಾಕ್ಟುದಾರರಿಗೆ ಸೆಂಟ್ರಲ್ ಜೈಲ ಸೂಪರಿಂಟೆಂಡೆಂಟರವರಿಂದ ಪಾವತಿ ಮಾಡಲ್ಪಡುವದು.

11. ವೈಗ್ರಾಣದ ಕೊಪಡಿಗಳ ಸ್ವಾಧೀನ ಕಂಟ್ರಾಕ್ಟುದಾರರಿಗೆ ಕೊಡಲ್ಪಡುವದು. ಅವುಗಳಲ್ಲಿ ಅವರು ಹೊಟ್ಟುಹೋಗದೆ ಇರತಕ್ಕ ಎಲ್ಲಾ ಜಿನಸುಗಳನ್ನೂ ಬಂದು ತಿಂಗಳ ಸರಬರಾಯಿಗೆ ಕಮ್ಮಿ ಇಲ್ಲದಂತೆ ಯಾವಾಗಲೂ ಇಟ್ಟಿರಬೇಕು. ಹೊಟ್ಟು ಹೋಗತಕ್ಕಂಥಾ ಪದಾರ್ಥಗಳು ಅಂದರೆ ತರಕಾರಿ ಮುಂತಾದ್ದು ಪ್ರತಿ ದಿನವೂ ಬೆಳಗಿನ 8 ಘಂಟೆಗೆ ಜೈಲ್‌ನಲ್ಲಿ ಹಾಜರ್ಮಾಡಬೇಕು.

12. ಈ ಕಂಟ್ರಾಕ್ಟು ಬಳಗುತ್ತಿಗೆಯಾಗಿ ಕೊಡಬಾರದು.

13. ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಮುಚ್ಚಳಿಕೆಯ ಷರತ್ತಿಗೆ ತಪ್ಪಿ ನಡೆದರೂ ಅಥವಾ ನಾಲಾಯಖಾದ ಸಾಮಾನನ್ನು ಸರಬರಾಯಿ ಮಾಡಿದರೂ ಜೈಲ್ ಸೂಪರಿಂಟೆಂಡೆಂಟರು ಅವರ ಯುಕ್ತಾನುಸಾರ 50 ರೂಪಾಯಿಗೆ ವಿಾರದೆ ಜುರ್ಮಾನೆ ಹಾಕುವರು ಮತ್ತು ಪದೇಪದೆ ಆ ಮುಚ್ಚಳಿಕೆ ಷರತ್ತಿಗೆ ವಿರೋಧವಾಗಿ ನಡೆದರೆ ಆ ಕಂಟ್ರಾಕ್ಟು ರದ್ದು ಮಾಡಿ ತೀರ್ಮಾನಿತ ಮೊಬಲಗು ಸರಕಾರಕ್ಕೆ ದಂಡವಾಗಿ ತೆಕ್ಕೊಳ್ಳಲ್ಪಟ್ಟೀತು.

14. ಮುಚ್ಚಳಿಕೆ ಷರತ್ತಿಗೆ ತಪ್ಪಿ ನಡದ ಎಲ್ಲಾ ಪ್ರಮೇಯಗಳಲ್ಲೂ ಸೂಪರಿಂಟೆಂಡೆಂಟರವರಿಂದ ಮಾಡಲ್ಪಟ್ಟ ಫೈನಲ್ ಅಭಿಪ್ರಾಯಗಿರತಕ್ಕದ್ದು.

15. ಕಂಟ್ರಾಕ್ಟುದಾರನು ಖೈದಿಗಳ ಉಪಯೋಗಕ್ಕಾಗಿ ಬೇಕಾಗಿರುವ ಹುಲನ್ನೂ ತರಕಾರಿಯನ್ನೂ ಮತ್ತು ತೋಟದ ಜಳಸನ್ನೂ ಮುಚ್ಚಳಿಕೆಯಲ್ಲಿ ನಮೂದಾಗುವ ದರದಂತೆ ಜೈಲಿನಿಂದ ಕೊಂಡುಕೊಳ್ಳಲು ಬದ್ಧನಾಗಿರುವನು.

16. ಈ ವಿಷಯವಾಗಿ ಇನ್ನೇನಾದರೂ ಹೆಚ್ಚು ವರ್ತಮಾನ ಅಗತ್ಯವಾದಲ್ಲಿ ಸೂಪರಿಂಟೆಂಡೆಂಟರ ಆಫಿಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

17. ಕಂಟ್ರಾಕ್ಟುಗಳು ಮೈಸೂರ ದೇಶದ ಜೈಲುಗಳ ಇನ್‌ಸ್ಪೆಕ್ಟರ್ ಜನರಲ್‌ರವರ ಮುಂಜೂರಾತಿಗೆ ಒಳಪಟ್ಟಿರತಕ್ಕದ್ದು. ಇವರು ದರಖಾಸ್ತುಗಳು ಎಲ್ಲವನ್ನೇ ಆಗಲಿ ಅಥವಾ ಯಾವ ದರಖಾಸ್ತನ್ನೇ ಆಗಲಿ ತಿರಸ್ಕರಿಸಲು ಅಧಿಕಾರವನ್ನು ಇಟ್ಟುಕೊಂಡಿದಾರೆ.

18. ಕಂಟ್ರಾಕ್ಟುದಾರರು ಈ ಕಂಟ್ರಾಕ್ಟು ತೆಗೆದುಕೊಂಡ ತರುವಾಯ, ತಮ್ಮ ಕರಾರು ಮೇರಿಗೆ ನಡೆಯಲು ಇಷ್ಟವಿಲ್ಲದವರಾಗಿದ್ದರೆ, ಅವರು ಕೊನೇಪಕ್ಷ ಬಂದು ತಿಂಗಳ ಮುಂಚಿತವಾಗಿ ನೋಟಿಸು ಕೊಟ್ಟು ತಮ್ಮ ತೀರ್ಮಾನಿತ ಹಣವನ್ನು ಸರಕಾರಕ್ಕೆ ದಂಡವಾಗಿ ಬಿಟ್ಟುಬಿಡಬೇಕು.

19. ಆ ಪ್ರಕಾರ ಸದರೀ ಕಂಟ್ರಾಕ್ಟುದಾರರು ತಮ್ಮ ಕರಾರಿಗೆ ತಪ್ಪಿದ್ದರಿಂದ ಅಥವಾ ಅವರ ಮುಚ್ಚಳಿಕೆಯಲ್ಲಿ ನಮೂದಾದ ಪದಾರ್ಥಗಳನ್ನು ಸರಕಾರದವರು ಸ್ಥಳೀಯವಾದ ಬಾಜಾರಿನಲ್ಲಿ ಮುಚ್ಚಳಿಕೆ ದರಕ್ಕಿಂತಲೂ ಹೆಚ್ಚು ದರ ಕೊಟ್ಟು ತಕ್ಕೊಳ್ಳುವದರಿಂದ ಸರಕಾರದವರಿಗೆ ಉಂಟಾಗಬಹುದಾದ ನಷ್ಟವನ್ನು ಭರ್ತೀನಾಮವೆಂದೂ ಸಹ ಬದ್ಧರಾಗಿರಬೇಕು.

ಪರಾ.—ಈ ಕಂಟ್ರಾಕ್ಟುಗಳಲ್ಲಿ ಯಾವ ವಿಧವಾದ ರಿಯಾಯತಿಯನ್ನೂ ಮುಂಡೋಣಾಗಲಾರದು.

ಹೆಚ್. ಹೆಚ್. ಸ್ಪಾರ್ಕ್ಸ್,
ಸೂಪರಿಂಟೆಂಡೆಂಟ್ ಸೆಂಟ್ರಲ್ ಜೈಲ್.

ಫಾರೆಸ್ಟ್ ಇಲಾಖಾ.

ನೋ ಟಿ ಸ್ .

ತಾರೀಖು 2ನೇ ಸೆಪ್ಟಂಬರ್ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಮೈಸೂರು ದೇಶದಲ್ಲಿ ಉತ್ಪತ್ತಿಯಾದ ಗಂಧದ ಸಾಲಿಯಾನಾ ಹರಾಜುಗಳು ಈ ಕೆಳಗೆ ನಮೂದಾಗುವ ಸ್ಥಳಗಳಲ್ಲಿ ಅವುಗಳ ಪಕ್ಕದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಆಯಾ ಡಿಸ್ಟ್ರಿಕ್ಟು ಪೆಪ್ಯುಟಿ ಕಮಿಷ್ಟ್ರಿಷನರವರು ಮತ್ತು ಫಾರೆಸ್ಟ್ ಆಫಿಸರುಗಳಿಂದ ನಡಿಸಲ್ಪಡುವವು.

ಡಿಸ್ಟ್ರಿಕ್ಟು.	ಕೋಠಿ ಹೆಸರು.	ಹರಾಜು ತಾರೀಖು.
ಮೈಸೂರು	ಹುಣಸೂರು	28ನೇ ನವಂಬರ್ 1896.
ಡಿಟೋ	ಶ್ರೀರಂಗಪಟ್ಟಣ	1ನೇ ಡಿಸೆಂಬರ್ ,,
ಬಂಗಳೂರು	ಬೆಂಗಳೂರು	4ನೇ ಡಿಟೋ ,,
ಹಾಸನ	ಹಾಸನ	7ನೇ ಡಿಟೋ ,,
ಕಡೂರು	ಚಿಕ್ಕಮಗಳೂರು	10ನೇ ಡಿಟೋ ,,
ಶಿವಮೊಗ್ಗಾ	ಶಿವಮೊಗ್ಗಾ	15ನೇ ಡಿಟೋ ,,
ಡಿಟೋ	ಸಾಗರ	18ನೇ ಡಿಟೋ ,,
ಡಿಟೋ	ತೀರ್ಥಹಳ್ಳಿ	22ನೇ ಡಿಟೋ ,,

2. ಈ ವರುಷ (i) ಬಂಗಳೂರು, ಹಾಸನ, ಕಡೂರು ಮತ್ತು ಶಿವಮೊಗ್ಗಾ ಡಿಸ್ಟ್ರಿಕ್ಟು ಕೋಠಿಗಳಲ್ಲಿ ಹಳೇ ತರಹೆ ಪ್ರಕಾರವೂ (ii) ಅಜವಾಯಿಷಿ ಬಗ್ಗೆ ಮೈಸೂರು ಡಿಸ್ಟ್ರಿಕ್ಟು ಕೋಠಿಗಳಲ್ಲಿ ಹೊಸ ಯಾ ಬೊಂಬಾಯಿ ತರಹೆ ಪ್ರಕಾರವೂ ಯರಸು ವಿಧವಾಗಿ ಸಂದಲನ್ನು ರಾಸು ಮಾಡಿಸಿರುತ್ತೆ.

3. ಇದುವರಿಗೂ ಜಾರಿಯಲ್ಲಿರುವ ವಜನಿ ಬಟ್ಟುಗಳೇ ಈಗಲೂ ಉಪಯೋಗಿಸಲ್ಪಡುವವು.

4. ಪ್ರತಿ ಕೋಠಿಯಲ್ಲಿಯೂ ಬಿಕರಿ ಬಗ್ಗೆ ವಧಗಿಸಲ್ಪಡುವ ಸಂದಲಿನ ತರಹೆಗಳ ವೊತ್ತವನ್ನ ಇದರಡಿ ನಿವರಿಸಿದೆ.